**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ,**

**ಕೆ.ಆರ್.ನಗರ .**

**ಸಿ.ಸಿ ನಂಃ 1060/2017**

| | | |
|---|---|---|
| **ಸಾಕ್ಷಿಯ ಹೆಸರಃ** | **ಅಶೋಕ** | **ಪ್ರಾಸಾಃ 3** |
| **ತಂದೆಯ ಹೆಸರುಃ** | **ಪುಟ್ಟಸ್ವಾಮಪ್ಪ** | **ಚಾಸಾಃ 1** |
| **ವಯಸ್ಸುಃ** | **40 ವರ್ಷ** | **ದಿಃ 19-10-2024** |
| **ಉದ್ಯೋಗಃ** | **ಮುಖ್ಯ ಪೇದೆ, ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ** | **ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.** |
| **ವಾಸ ಸ್ಥಳಃ** | **ಹುಣಸೂರು** | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ದಿಃ 17-07-2012 ರಿಂದ ದಿಃ 10-09-2018 ರವರೆಗೆ ಸಾಲೀಗ್ರಾಮ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತಿರುತ್ತೇನೆ.

ದಿಃ 01-10-2016 ರಂದು ನನಗೆ ಚಾಸಾ 12 ರವರು ಸಮಸ್ಸ ಜಾರಿ ಮಾಡುವ ಕರ್ತವ್ಯಕ್ಕೆ ನೇಮಿಸಿದ್ದು, ಅದರಂತೆ ನಾನು ಹಳೇ ಮಿರ್ಲೆ ಗ್ರಾಮಕ್ಕೆ ಹೋಗಿ ಸಮನ್ಸ ಜಾರಿ ಕರ್ತವ್ಯವನ್ನು ಮಾಡಿ, ಮದ್ಯಾಹ್ನ 3.20 ಗಂಟೆಗೆ ವಾಪಸ್ಸ ಬರುತ್ತಿರುವಾಗ ಹಳೇ ಮಿರ್ಲೆ ಸಮೀಪ ಒಬ್ಬ ವ್ಯಕ್ತಿಯು ತನ್ನ ಮುಂಭಾಗ ಮತ್ತು ಹಿಂಭಾಗದಲ್ಲಿ ಬಾಕ್ಸಗಳನ್ನು ತುಂಬಿಕೊಂಡು ಹೋಗುತ್ತಿದ್ದು, ನನ್ನನ್ನು ನೋಡಿ ಸದರಿ ವ್ಯಕ್ತಿಯು ರಸ್ತೆಯ ಪಕ್ಕಕ್ಕೆ ಹೋಗುತ್ತಿದ್ದನು. ಸದರಿ ವ್ಯಕ್ತಿಯು ಗಾಬರಿಯಾಗಿರುವುದನ್ನು ನೋಡಿ ನನ್ನ ಮೋಟಾರ್ ಸೈಕಲ್ ನ್ನು ತಿರುಗಿಸಿ, ಸದರಿ ವ್ಯಕ್ತಿಯ ಬಳಿ ಹೋಗಿ ಇದು ಏನು ಎಂದು ಕೇಳಿದಾಗ, ಸದರಿ ವ್ಯಕ್ತಿಯು ಅಂಗಡಿಯ ಸಮಾನುಗಳೆಂದು ತಡವರಿಸಿ ಹೇಳಿರುತ್ತಾನೆ. ನನಗೆ ಅನುಮಾನ ಬಂದು ಅದನ್ನು ಬಿಚ್ಚಿಸಿ ಚೀಲದಲ್ಲಿದ್ದ ಬಾಕ್ಸನಲ್ಲಿ ಅದು ಮದ್ಯಪಾನ ಬಾಕ್ಸಗಳಾಗಿರುತ್ತದೆ. ಮದ್ಯಗಳನ್ನು ಸಾಗಾಟ

ಮಾಡಲು ನಿಮ್ಮ ಬಳಿ ಪರವಾನಿಗೆ ಇದೆಯಾ ಎಂದು ಕೇಳಿದಾಗ, ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಎಂದು ವ್ಯಕ್ತಿಯು ತಿಳಿಸಿರುತ್ತಾನೆ. ನಂತರ ಚಾಸಾ 12 ರವರಿಗೆ ದೂರವಾಣಿಯ ಮುಖಾಂತರ ಒಬ್ಬ ವ್ಯಕ್ತಿಯು ಎರಡು ಪ್ಲಾಸ್ಟಿಕ್ ಚೀಲಗಳಲಿಲ್ಲದ್ದ ಬಾಕ್ಸನಲ್ಲಿ ಮದ್ಯವನ್ನು ತುಂಬಿ ಸಾಗಾಣಿಕೆ ಮಾಡುವ ವಿಷಯವನ್ನು ತಿಳಿಸಿರುತ್ತೇನೆ. ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾವನ್ನು ಕೇಳಲಾಗಿ, ತನ್ನ ಹೆಸರು ಹರೀಶ ಬಿನ್ ಶಿವಣ್ಣ, ಮೂಡಲಬೀಡು ಗೇಟ್, ಸಾಲೀಗ್ರಾಮ ಎಂದು ಹೇಳಿರುತ್ತಾನೆ. ನಂತರ ಚಾಸಾ 12 ರವರು ಚಾಸಾ 4, 5 ರವರ ಜೊತೆ ಸ್ಥಳಕ್ಕೆ ಬಂದು ನಾನು ತಡೆದು ನಿಲ್ಲಿಸಿದ ವ್ಯಕ್ತಿ ಮತ್ತು ಮಾಲುಗಳನ್ನು ಪರಿಶೀಲಿಸಿರುತ್ತಾರೆ. ಒಂದು ಚೀಲದಲ್ಲಿ ಮೂರು ಬಾಕ್ಸಗಳಂತೆ ಒಟ್ಟು 6 ಬಾಕ್ಸಗಳು ಇರುವುದು ಕಂಡು ಬಂದಿರುತ್ತದೆ. ನಂತರ ಚಾಸಾ 12 ರವರು ಆರೋಪಿಯ ಬೈಕ್ ಸಂಖ್ಯೆ ಕೆಎ 45–ಯು–7845 ಬೈಕ್ ಮುದ್ದೇ ಮಾಲು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆದುಕೊಂಡು ಹೋಗಿರತ್ತಾರೆ. ನಂತರ ಅಮಾನತು ಮಹಜರಗಾಗಿ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಅವರ ಸಮಕ್ಷಮದಲ್ಲಿ ಮುದ್ದೇಮಾಲುಗಳನ್ನು ಅಮಾನತು ಪಡಿಸಿಕೊಂಡಿರುತ್ತಾರೆ. 5 ಬಾಕ್ಸಗಳಲ್ಲಿ ಪ್ರತಿಯೊಂದು ಬಾಕ್ಸನಲ್ಲಿಯೂ ಸಹ ತಲಾ 90 ಎಂ ಎಲ್ ನ ಓರಿಜಲ್ ಚಾಯ್ಸ ಡಿಲೆಕ್ಸ ವಿಸ್ಕಿಯ 96 ಪ್ಯಾಕೆಟ್ ಗಳು ಹಾಗೂ 6 ನೇ ಬಾಕ್ಸನಲ್ಲಿ 180 ಎಂ ಎಲ್ ನ ಓಲ್ಡ ಟಾವರಿನ ವಿಸ್ಕಿಯ 39 ಪ್ಯಾಕೆಟ್ ಗಳು ಇದ್ದವು. ಓರಿಜಲ್ ಚಾಯ್ಸ ವಿಸ್ಕಿಯ ಒಂದು ಪ್ಯಾಕೆಟ್ ನ ಬೆಲೆಯು 26.54 ಅಂತಾ ನಮೂದಾಗಿರುತ್ತದೆ. ಓಲ್ಡ ಟಾವರಿನ ವಿಸ್ಕಿಯ ಒಂದು ಪ್ಯಾಕೆಟ್ ನ ಬೆಲೆಯು 62.19 ಅಂತಾ ನಮೂದಾಗಿರುತ್ತದೆ. ಸಂಜೆ 5.00 ಗಂಟೆಯಿಂದ 7.00 ಗಂಟೆಯವರೆಗೆ ಮಹಜರ್ ನ ಮುಖಾಂತರ ಸದರಿ ಮದ್ಯಗಳನ್ನು ಜಪ್ತ ಪಡಿಸಿಕೊಂಡಿರುತ್ತಾರೆ. ನಂತರ ಚಾಸಾ 12 ರವರು ಆರೋಪಿಯ ವಿರುದ್ಧ ದೂರನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿರುತ್ತಾರೆ. ಸ್ಥಳ ಮಹಜರ್ ನಲ್ಲಿದ್ದ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸ್ಥಳ ಮಹಜರನ್ನು ನಿಪಿ 4 ಎಂದು ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಓಲ್ಡ ಟಾವರಿನ್ ವಿಸ್ಕಿಯ 5 ಟೆಟ್ರಾ ಪ್ಯಾಕೆಟ್ ಗಳನ್ನು ಹಾಗೂ 90 ಎಂ ಎಲ್ ನ ಓರಿಜಲ್ ಚಾಯ್ಸ ವಿಸ್ಕಿಯ 25 ಟೆಟ್ರಾ ಪ್ಯಾಕಟ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಓಲ್ಡ ಟಾವರಿನ್ ವಿಸ್ಕಿಯ 5 ಟೆಟ್ರಾ ಪ್ಯಾಕೆಟ್ ಗಳನ್ನು ಜೊತೆಯಾಗಿ ಮುದ್ದೇ ಮಾಲು 1 ಎಂದು ಓರಿಜಲ್ ಚಾಯ್ಸ ವಿಸ್ಕಿಯ 25 ಟೆಟ್ರಾ ಪ್ಯಾಕೆಟಿ ಗಳನ್ನು ಮುದ್ದೇ ಮಾಲು 2 ಎಂದು ಗುರುತಿಸಲಾಯಿತು.

ವಶಪಡಿಸಿಕೊಂಡು ಮುದ್ದೇ ಮಾಲಗಳ ಪೈಕಿ ತಲಾ 5 ಪ್ಯಾಕೆಟ್ ಗಳಂತೆ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಪ್ಯಾಕ್ ಮಾಡಿ ಎನ್ ಎಂಬ ಇಂಗ್ಲೀಷ ಅಕ್ಷರದಿಂದ ಸೀಲು ಮಾಡಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಟಿ. ಜಿ ವಕೀಲರಿಂದ</u>**

1. ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ ಜಾರಿ ಮಾಡುವ ಕೆಲಸ ನಿಮಿತ್ತ ನಾನು ಹೋಗಿ ಬರುತ್ತಿದೆ. ಸದರಿ ದಿನದಂದು ಯಾವ ಪ್ರಕರಣದ ಸಮನ್ಸ ಜಾರಿ ಮಾಡಲು ನಾನು ಹೋಗಿದ್ದೆ ಎನ್ನುವ ಬಗ್ಗೆ ಡೈರಿಯಲ್ಲಿ ಉಲ್ಲೇಖವಾಗಿರುತ್ತದೆ. ಯಾವ ಪ್ರಕರಣ ಸಮನ್ಸ ಜಾರಿ ಮಾಡಲು ಸದರಿ ದಿನದಂದು ನೀವು ಹೋಗಿದ್ದೀರಿ ಎನ್ನುವ ಬಗ್ಗೆ ತನಿಖಾಧಿಕಾರಿಯವ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಲು ಏನಾದರೂ ತೊಂದರೆ ಇತ್ತಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ವಿಷಯವನ್ನು ಡೈರಿಯಲ್ಲಿ ಬರೆದಿರುವುದರಿಂದ ನನ್ನ ಹೇಳಿಕೆಯಲ್ಲಿ ನಾನು ಹೇಳಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ದಿನದಂದು ನಾನು ಯಾವುದೇ ಸಮನ್ಸನ್ನು ಜಾರಿ ಮಾಡಲು ಹೋಗದೇ ಇದ್ದ ಕಾರಣ ನಾನು ಪ್ರಕರಣದ ಸಂಖ್ಯೆಯನ್ನು ತನಿಖಾಧಿಕಾರಿಯವರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ನಾನು ಯಾವೆಲ್ಲ ಪ್ರಕರಣಗಳ ಸಮನ್ಸ ಜಾರಿ ಮಾಡಿರುತ್ತೇನೆ ಎಂದು ಉಲ್ಲೇಖ ಮಾಡಿರುವ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

2. ಘಟನಾ ದಿನದಂದು ಚಾಸಾ 12 ರವರು ಘಟನಾ ಸ್ಥಳದಲ್ಲಿ ಯಾವುದೇ ಮಹಜರ್ ನ್ನು ಮಾಡಿರುವುದಿಲ್ಲ. ಸ್ಥಳ ಮಹಜರನ್ನು ಮಾಡುವ ಪೂರ್ವದಲ್ಲಿ ಘಟನಾ ಸ್ಥಳದ ಅಕ್ಕಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿರುವವರಲ್ಲಿ ವಿಚಾರಿಸಿದ್ದು, ಸದರಿ ವ್ಯಕ್ತಿಗಳು ಘಟನಾ ಸ್ಥಳದ ಪಕ್ಕದಲ್ಲಿರುವ ಜಮೀನು ತಿಮ್ಮೇಗೌಡ ಮತ್ತು ಗೋವಿಂದರವರಿಗೆ ಸೇರಿರುತ್ತದೆ ಎಂದು ನಮಗೆ ಹೇಳಿರುತ್ತಾರೆ. ಸದರಿ ವ್ಯಕ್ತಿಗಳ ಸಹಿಯನ್ನು ನಾವು ಸ್ಥಳ ಮಹಜರ್ ನಲ್ಲಿ ಪಡೆದುಕೊಂಡಿರುವುದಿಲ್ಲ. ಸ್ಥಳ ಮಹಜರ ಮಾಡಲು ನಾವು ವಡ್ಡರಕೊಪ್ಪಲು ಗ್ರಾಮದ ಜನರನ್ನು ನಮ್ಮ ಜೊತೆ ಕರೆದುಕೊಂಡು ಹೋಗಿದ್ದೇವು.

3. ನಾನು ಸ್ಥಳ ಮಹಜರನ ಬಗ್ಗೆ ನನ್ನ ಹೇಳಿಕೆಯಲ್ಲಿ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಿಃ 01-10-2016 ರಂದು ನಾನು ತನಿಖಾಧಿಕಾರಿಯವರ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸ್ಥಳ ಮಹಜರ ದಿಃ 02-10-2016 ರಂದು

ಆಗಿರುತ್ತದೆ ಎಂದರೆ ಸರಿ. ಮುದ್ದೆ ಮಾಲು 1 ಮತ್ತು 2 ರ ತಯಾರಿಕಾ ದಿನಾಂಕವನ್ನು ನಿಪಿ 1 ರ ಅಮಾನತುಮಹಜರ್ ನಲ್ಲಿ ನಮೂದಿಸಿರುವುದಿಲ್ಲ. ಜಪ್ತಿ ಪಡಿಸಿಕೊಂಡ ಬಾಕ್ಸಗಳನ್ನು ಮತ್ತು ಚೀಲಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಮುದ್ದೇ ಮಾಲು 1 ಮತ್ತು 2 ರ ಮೇಲೆ ನನ್ನ ಸಹಿ ಇರುವುದಿಲ್ಲ ಎಂದರೆ ಸರಿ.

4. ಮುದ್ದೇ ಮಾಲು 1 ಮತ್ತು 2 ಜಪ್ತಿ ಪಡಿಸುವಾಗ ನಾನು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ಕ್ಕೆ ನಾನು ಸಹಿ ಮಾಡಿರುವುದಿಲ್ಲ. ಘಟನಾ ದಿನದಂದು ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಅಮಾನತು ಮಹಜರನ್ನು ಹಾಗೂ ನಿಪಿ 4 ರ ಘಟನಾ ಮಹಜರನ್ನು ನನ್ನ ಸಮಕ್ಷಮ ಮಾಡದಿದ್ದರೂ ಸಹ ನನ್ನ ಸಮಕ್ಷಮ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಲೀಗ್ರಾಮದಲ್ಲಿ ಆರೋಪಿಗೆ ಸೇರಿದ ಸ್ವಂತ ಬಾರ್ ಇದೆ ಎಂದರೆ ಸರಿ. ಮೊದಲಿನಿಂದಲೂ ನನಗೆ ಆರೋಪಿಯ ಪರಿಚಯ ಇತ್ತು ಎಂದರೆ ಸರಿ. ನನಗೇ ಆರೋಪಿಯ ವಿರುದ್ಧ ವೈಯಕ್ತಿಕ ದ್ವೇಷ ಇದ್ದ ಕಾರಣ ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೇಲಿನ ವೈಯಕ್ತಿಕ ದ್ವೇಷದಿಂದ ನಾನು ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ